**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

**ವಿಜಯಪುರ ಇವರ ನ್ಯಾಯಾಲಯ**

**ಸ್ಪೆಶಲ್ (ಎನ್.ಡಿ.ಪಿ.ಎಸ್.)ಕೇಸ್ ನಂ.7/2022**

**ಪಿಡಬ್ಲ್ಯೂ- 03(ಸಿಡಬ್ಲ್ಯೂ-06)**

ಸಾಕ್ಷಿದಾರರ ಹೆಸರು : ಭೀಮಣ್ಣ ಕುಂಬಾರ

ತಂದೆಯ ಹೆಸರು : ಶಂಕ್ರಪ್ಪ

ವಯಸ್ಸು : 40 ವರ್ಷ

ಉದ್ಯೋಗ : ಅಬಕಾರಿ ಮುಖ್ಯ ಪೇದೆ, ಹೀರೆಕೆರೂರು, ಜಿಲ್ಲಾ: ಹಾವೇರಿ,

ವಾಸಸ್ಥಳ : ಹಿರೇಕೇರೂರು, ಜಿಲ್ಲಾ: ಹಾವೇರಿ

**ಸಾಕ್ಷಿಗೆ ಇಂದು ದಿನಾಂಕ :- 16/07/2025 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ :- ಸರಕಾರಿ ಅಭಿಯೋಜಕರವರಿಂದ.**

ನಾನು ದಿ: 15.10.2019 ರಿಂದ ದಿ: 13.02.2022 ರವರೆಗೆ ಅಬಕಾರಿ ಉಪಾಯುಕ್ತರ ಕಚೇರಿ, ವಿಜಯಪುರ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 29.09.2021 ರಂದು ಮಧ್ಯಾಹ್ನ 2.00 ಗಂಟೆಗೆ ನಾನು ಮತ್ತು ಚಾಸಾ-1 ರವರು ಕಚೇರಿಯಲ್ಲಿದ್ದಾಗ, ಚಾಸಾ-1 ರವರಿಗೆ ದೂರವಾಣಿ ಮೂಲಕ ಬಾತ್ಮಿ ಬಂದಿದ್ದು, ಅದರಲ್ಲಿ ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ಮಿರ್ಗಿ ಗ್ರಾಮದ ಮಹಾದೇವ ಪದಮಣ್ಣ ಖಸ್ಕಿ ಇವರ ಜಮೀನಿನ ಸರ್ವೆ ನಂ.192/12 ರಲ್ಲಿ ಕಬ್ಬಿಣ ಜಮೀನಿನಲ್ಲಿ ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಗಾಂಜಾ ಗಿಡಗಳನ್ನು ಬೆಳೆದಿರುತ್ತಾನೆ ಎಂದು ಬಾತ್ಮಿ ಬಂದಿತ್ತು. ಆಗ ಚಾಸಾ-1 ರವರು ಚಾಸಾ-4 ರವರಿಗೆ ಬಾತ್ಮಿ ಬಂದ ವಿಷಯವನ್ನು ತಿಳಿಸಿ, ದಾಳಿಯ ನೇತೃತ್ವವನ್ನು ವಹಿಸಲು ಕೇಳಿಕೊಂಡರು.

ನಂತರ ನಾನು, ಚಾಸಾ-5 ಮತ್ತು 7 ರವರು ಕೂಡಿಕೊಂಡು ಚಾಸಾ-1

ರವರೊಂದಿಗೆ ಇಲಾಖಾ ವಾಹನದಲ್ಲಿ ಮದ್ಯಾಹ್ನ 2.20 ನಿಮಿಷಕ್ಕೆ ಕಚೇರಿಯಿಂದ



ಹೊರಟು, ಮಾರ್ಗಮಧ್ಯದಲ್ಲಿ ಬರುವ ಇಂಡಿ ಬೈಪಾಸ್ ಹತ್ತಿರ ಬಿಜ್ಜರಗಿ ಟಾಟಾ ಶೋರೂಮ ಹತ್ತಿರ ವಾಹನವನ್ನು ನಿಲ್ಲಿಸಿ, ದಾಳಿಯ ಸಮಯದಲ್ಲಿ ಪಂಚರನ್ನು ಕರೆತರಲು ನನಗೆ ಮತ್ತು ಚಾಸಾ-5 ರವರಿಗೆ ತಿಳಿಸಿದಂತೆ, ನಾವು ಅಲ್ಲೆ ನಿಂತಿದ್ದ ಚಾಸಾ-2 & 3 ರವರನ್ನು ಕರೆದುಕೊಂಡು ಬಂದು ಚಾಸಾ-1 ರವರ ಮುಂದೆಹಾಜರು ಪಡೆಸಿದ್ದು, ಅವರಿಗೆ ಚಾಸಾ-1 ರವರು ಬಾತ್ಮಿ ಬಂದ ವಿಚಾರವನ್ನು ತಿಳಿಸಿ, ಪಂಚರಾಗಿ ಬರುವಂತೆ ಕೋರಿಕೊಂಡರು.

ನಂತರ ನಾಗಠಾಣ-ಇಂಡಿ ಮಾರ್ಗವಾಗಿ, ಮಿರ್ಗಿ ಗ್ರಾಮದ ಸರ್ವೆ ನಂ.192/12 ರ ಜಮೀನಿನ ಬಳಿ ಹೋದಾಗ ಸಮಯ ಮಧ್ಯಾಹ್ನ 3.00 ಗಂಟೆ ಆಗಿತ್ತು. ಆ ಜಮೀನಿನ ಪಕ್ಕದಲ್ಲಿ ಒಬ್ಬ ವ್ಯಕ್ತಿ ಕೆಲಸ ಮಾಡುತ್ತಿರುವುದು ಕಂಡು ಬಂತು. ಆತನು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಓಡಲು ಪ್ರಾರಂಭಿಸಿದನು, ಆಗ ನಾನು ಮತ್ತು ಚಾಸಾ-5 ರವರು ಹೋಗಿ ಆ ವ್ಯಕ್ತಿಯನ್ನು ಹಿಡಿದುಕೊಂಡು, ಚಾಸಾ-1 ರವರ ಬಳೀ ಕರೆದುಕೊಂಡು ಬಂದೆವು. ಚಾಸಾ-1 ರವರು ಆತನನ್ನು ವಿಚಾರಿಸಿದಾಗ ಆತ ತನ್ನ ಹೆಸರ ಮಹಾದೇವ ಪದಮಣ್ಣ ಖಸ್ಕಿ ಎಂದು ಹೇಳಿದನು. ಹೊಲವನ್ನು ಶೋಧನೆ ಮಾಡುವ ಪೂರ್ವದಲ್ಲಿ ಸ್ಥಳದಲಿ ಶೋಧನಾ ಸಮುಚಿತ ವರದಿಯನ್ನು ತಯಾರಿಸಿದೇವು. ಆ ವ್ಯಕ್ತಿಯನ್ನು ಕರೆದುಕೊಂಡು ಹೊಲವನ್ನು ಪರೀಶೀಲಿಸಲಾಗಿ ಕಬ್ಬಿನ ಮಧ್ಯದ ಸಾಲಿನಲ್ಲಿ ಅಂದಾಜು 4

ರಿಂದ 5 ಅಡಿ ಎತ್ತರದ 62 ಗಾಂಜಾ ಗಿಡಗಳು ಬೆಳೆದಿರುವುದು ಕಂಡು ಬಂತು. ಅವುಗಳನ್ನು ಬೇರು ಸಮೇತ ಕಿತ್ತು, ತೂಕ ಮಾಡಿ ನೋಡಲಾಗಿ ಅದು 100 ಕೆಜಿ ತೂಕ



ಇರುವುದು ಕಂಡು ಬಂತು. ಆ ಗಿಡಗಳನ್ನು ಬಿಳಿ ಬಣ್ಣದ ಪ್ಲಾಸ್ಟಿಕ ಚೀಲದಲ್ಲಿ ಒಂದರಲ್ಲಿ 30 ಮತ್ತು ಇನ್ನೊಂದರಲ್ಲಿ 32 ಗಿಡಗಳನ್ನು ಕಟ್ಟಿ ಅವುಗಳಿಂದ ತಲಾ 2 ಗಾಂಜಾ ಗಿಡಗಳನ್ನು ಮಾದರಿಗಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ ಸಂಗ್ರಹಿಸಿಕೊಂಡು, ಕಚೇರಿ ಮೊಹರು ಹಾಕಿ ಅಮಾನತ ಪಡೆಸಿಕೊಂಡೆವು. ನಂತರ ಸ್ಥಳದಲ್ಲಿ ಸಂಜೆ 4.00 ಗಂಟೆಯಿಂದ 6.00 ಗಂಟೆವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಂತರ ಆರೋಪಿಯನ್ನು ಮತ್ತು ಅಮಾನತ ಪಡೆಸಿಕೊಂಡ ಮುದ್ದೆಮಾಲಿನೊಂದಿಗೆ ಕಚೇರಿಗೆ ವಾಪಸ್ಸಾಗಿರುತ್ತೇವೆ. ಆ ದಿನ ವಶಕ್ಕೆ ಪಡೆದುಕೊಂಡ ಆರೋಪಿ ಹಾಗೂ ಮಾದರಿಗಾಗಿ ಅಮಾನತ ಪಡೆಸಿಕೊಂಡ ಗಾಂಜಾ ಗಿಡಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯ ಮುಂದೆ ಇರುವ ಆರೋಪಿ ಮತ್ತು ಮು.ಮಾ.1 & 2 ನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆಗೆ ನಾನು ದಸ್ತೂರಾಗಿ ಸಹಿ ಮಾಡಿದ್ದು, ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನಿ.ಪಿ.6 ನ್ನು ನೋಡಿ ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿ.ಪಿ.6(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು:- ಶ್ರೀ ಜಿ.ಎ.ಎ., ವಕೀಲರಿಂದ ಆರೋಪಿತನ ಪರಃ**

ಮಿರ್ಗಿ ಗ್ರಾಮ ಇಂಡಿ ಅಬಕಾರಿ ವಲಯಕ್ಕೆ ಬರುತ್ತದೆ ಎಂದರೆ ಸರಿ. ಚಾಸಾ-1 ರವರು ಮಾಹಿತಿ ಬಂದ ಬಗ್ಗೆ ಇಂಡಿ ಅಬಕಾರಿ ನಿರೀಕ್ಷಕರ ಜೊತೆ ಮಾತನಾಡಿ ನಿಮ್ಮ

ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ ಎಂದು ಕೇಳಿರುವುದಿಲ್ಲ. ನನ್ನ ಹೇಳಿಕೆಯನ್ನು ದಿ: 05.01.2022 ರಂದು ಇಂಡಿ ಅಬಕಾರಿ ನಿರೀಕ್ಷಕರು ಪಡೆದುಕೊಂಡಿರುತ್ತಾರೆ. ನಾನು



ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ದಿ: 29.09.2021 ರಂದು ಮಿರ್ಗಿ ಗ್ರಾಮದ ಸರ್ವೆ ನಂ.192/12 ರ ಜಮೀನಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮಿರ್ಗಿ ಗ್ರಾಮದ ಸರ್ವೆ ನಂ.192/12 ರ ಜಮೀನಿಗೆ ಅದೇ ಪ್ರಥಮ ಬಾರಿ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಮ್ಮನ್ನು ನೋಡಿ ಆರೋಪಿ ಆ ದಿನ ಸ್ಥಳದಿಂದ ಓಡಿ ಹೋದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಸ್ಥಳಕ್ಕೆ ಹೋದ ಬಗ್ಗೆ ಅಲ್ಲಿ ಫೋಟೋಗಳನ್ನು ತೆಗೆಸಿಕೊಂಡಿರುವುದಿಲ್ಲ.

ಸದರಿ ಜಮೀನಿನ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಗಾಂಜಾ ಗಿಡಗಳು ಬೆಳೆದಿದ್ದವು. ಸ್ಥಳದಲ್ಲಿ ಚಾಸಾ-1 ರವರು ಶೋಧನಾ ಸಮುಚಿತ ವರದಿಯನ್ನು ತಯಾರಿಸಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಬೋರವೆಲ್ ಇತ್ತು. ನಿ.ಪಿ.6 ನ್ನು ಕಚೇರಿಯಲ್ಲಿ ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.1 & 2 ನ್ನು ಸ್ಥಳದಲ್ಲಿ ಅಮಾನತ ಪಡೆಸಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

**Sd**/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಜಯಪುರ.